ಸಲಾಮವಾಡಿ ಏತ ನೀರಾವರಿ ಕುರಿತಾಗಿ

೩೮೮ ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಣ್ಣ ನೀರಾವರಿಯು ರಾಜ್ಯ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಸಲಾಮವಾಡಿ ಏತ ನೀರಾವರಿಗೆ ಮಂಜೂರಾದ ಹಣದ ಮೊತ್ತವೆಷ್ಟು ?

ಆ) ಇದರಲ್ಲಿ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ ?

ಇ) ಇದರಿಂದ ಆಗಬೇಕಿರುವ ನೀರಾವರಿ ಕ್ಷೇತ್ರವೆಷ್ಟು ?

ಈ) ಇದನ್ನು ಪೂರ್ತಿಗೊಳಿಸಲು ತಡವಾಗುತ್ತಿರುವುದಕ್ಕೆ ಕಾರಣಗಳೇನು ?

ಉ) ಈ ಕೆಲಸವು ಯಾವ ಇಲಾಖೆಯ ಮುಖಾಂತರ ನಡೆಯುತ್ತಿದೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿಯ ರಾಜ್ಯ ಸಚಿವರು).—

ಅ) ೫೯,೭೫,೩೦೦.೦೦ ರೂ.ಗಳು.

ಆ) ೨,೧೧,೮೪೯.೦೦ ರೂ.ಗಳು.

ಇ) ಈ ಯೋಜನೆಯು ಪೂರ್ತಿಯಾದರೆ ೩೩೩.೭೫ ಹೆಕ್ಟೇರ್ ಜಮೀನಿಗೆ ನೀರಾವರಿಯಾಗುತ್ತದೆ.

ಈ) ಈ ಯೋಜನೆಯು ಠೇವಣಿ ಹಂಚಿಕೆಯ ಮೂಲಕ ತೆಗೆದುಕೊಳ್ಳತಕ್ಕಂಥ ಕೆಲಸಗಳಲ್ಲಿ ಬರುವುದು ಈ ಯೋಜನೆಯಿಂದ ಪ್ರಯೋಜನ ಪಡೆಯುವ ಸೊಸೈಟಿ ಸದಸ್ಯರು ಇಲ್ಲಿಯವರೆಗೆ ೧,೫೦,೦೦೦ ರೂ.ಗಳಷ್ಟು ಮೊತ್ತವನ್ನು ಸರಕಾರಕ್ಕೆ ತುಂಬಿರುತ್ತಾರೆ. ಅವರು ತುಂಬಿದ ಹಣಕ್ಕಿಂತ ಹೆಚ್ಚು ವರಿ ಕೆಲಸ ಈಗಾಗಲೇ ಆಗಿದೆ. ಮುಂದೆ ತುಂಬಬೇಕಾದ ಹಣವನ್ನು ಸೊಸೈಟಿ ಸದಸ್ಯರುಗಳು ಇನ್ನೂ ತುಂಬಿಲ್ಲ. ಈ ಕಾರಣದಿಂದಾಗಿ ಕೆಲಸವು ವಿಳಂಬವಾಗಿದೆ.

ಉ) ಲೋಕೋಪಯೋಗಿ ಇಲಾಖೆಯ ಮುಖಾಂತರ ಈ ಕೆಲಸವು ನಡೆಯುತ್ತಿದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಈ ಸ್ಕೀಮ್ ಪ್ರಾರಂಭವಾದದ್ದು ಯಾವ ವರ್ಷ ? ಈಗ ಆದು ನಿಂತು ಹೋಗಿದೆ. ಅದನ್ನು ಪೂರ್ತಿಗೊಳಿಸುತ್ತೀರೋ ಹೇಗೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಯೋಜನೆ ೧೯೭೭ರಲ್ಲಿ ಪ್ರಾರಂಭವಾಯಿತು. ಸೊಸೈಟಿ ಯವರು ತಾವು ಕೊಡಬೇಕಾದ ಶೇರು ಹಣವನ್ನು ಕೊಟ್ಟಿಲ್ಲ. ಅವರು ಹಣವನ್ನು ಯಾವಾಗ ಕೊಡುತ್ತಾರೆ ಆಗ ಈ ಯೋಜನೆಯನ್ನು ಜಾರಿಗೆ ತರಬಹುದು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಸೊಸೈಟಿ ಈ ಹಣವನ್ನು ತುಂಬಲಿಕ್ಕೆ ಸಾಧ್ಯವಿಲ್ಲ. ಸರ್ಕಾರದವರೇ ಇದಕ್ಕೆ ಹಣವನ್ನು ಒದಗಿಸಬೇಕು.

ಶ್ರೀ ಆರ್. ಎನ್. ಲಕ್ಷ್ಮೀಪತಿ.— ಇದಂ ನಮ್ಮ ಪರ್ಯಾಲೋಚನೆಯಲ್ಲಿದೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾಡುತ್ತೇನೆಂದು ಹೇಳಿದರೆ ಏನಾಗುತ್ತದೆ ಸ್ವಾಮಿ ? ಈಗಾಗಲೇ ಎರಡು ಲಕ್ಷಕ್ಕೂ ಮಿಕ್ಕಿ ಹಣ ಖರ್ಚಾಗಿದೆ. ಸರ್ಕಾರದವರು ಹಣ ಕೊಡದೇ ಹೋದರೆ ಈ ಯೋಜನೆ ನಿಂತೇ ಹೋಗುತ್ತದೆ. ಹಿಂದುಳಿದ ಪ್ರದೇಶಕ್ಕೆ ಸೇರಿದ ಯೋಜನೆ ಇದು. ಇದನ್ನು ಪೂರ್ತಿ ಮಾಡುತ್ತೀರಾ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ. ಈ ಯೋಜನೆ ಒಂದೇ ಆಗಿದ್ದರೆ ಪೂರ್ತಿ ಮಾಡಬಹುದಾಗಿತ್ತು. ನಮ್ಮ ಸಂಸ್ಥಾನದಲ್ಲಿ ಯಾವ ಯಾವ ಯೋಜನೆಗಳು ಕಂಂಠಿತವಾಗಿವೆ ಎಂಬುದನ್ನು ತಿಳಿದುಕೊಂಡು ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಸರ್ಕಾರದವರು ತಾವು ರೈತ ಪ್ರತಿನಿಧಿಗಳು ಎಂದು ವರ್ಣನೆ ಮಾಡುತ್ತಾರೆ. ರೈತರ ಬಗ್ಗೆ ಅನುಕಂಪ ತೋರಿಸಿ ಸ್ವಾಮಿ. ಸರ್ಕಾರ ಇದರ ಬಗ್ಗೆ ಏಕೆ ಹಿಂಜರಿಯುತ್ತಿದೆಯೋ ಗೊತ್ತಾಗುತ್ತಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸರ್ಕಾರದ ೬೦ ಭಾಗ ಕೊಟ್ಟರೆ ರೈತರಿಂದ ೪೦ ಭಾಗ ಬರ ಬೇಕಾಗುತ್ತದೆ. ರೈತರೇ ಹೆಚ್ಚು ಮುತುವರ್ಜಿಯಿಂದ ಈ ಯೋಜನೆಯನ್ನು ಪೂರ್ಣ ಮಾಡಬೇಕು. ಆದರೆ ಇಡೀ ಸಂಸ್ಥಾನದಲ್ಲಿ ಇಂತಹ ಯೋಜನೆಗಳು ಎಷ್ಟು ಇವೆ ಎಂಬ ಪೂರ್ಣ ಚಿತ್ರವನ್ನು ತರಿಸಿ ಕೊಂಡು ನೋಡಿ, ಆದಕ್ಕೆ ಒಟ್ಟು ಎಷ್ಟು ಹಣ ಬೇಕಾಗುತ್ತದೆಂಬುದನ್ನು ನೋಡಿಕೊಂಡು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಯೋಜನೆ ಮಾಡುತ್ತೇವೆಂದು ಹೇಳಿದರೆ ಹೇಗೆ ೧೯೭೭ನೇ ಇಸವಿಯಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡಿ ಈಗಾಗಲೇ ೫–೬ ವರ್ಷ ಕಳೆದುಹೋಗಿದೆ. ಆದ್ದರಿಂದ ಇದರ ಬಗ್ಗೆ ಏನಾದರೂ ಒಂದು ನಿರ್ದಿಷ್ಟ ಉತ್ತರ ಕೊಟ್ಟರೆ ಒಳ್ಳೆಯದಾಗುತ್ತದೆಂದು ನಾನು ಭಾವಿಸುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗಲೇ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದು ಒಂದೇ ಆಗಿದ್ದರೆ ಖಂಡಿತವಾಗಿಯೂ ಮಾಡಬಹುದಾಗಿತ್ತು. ಆದರೆ ಇಡೀ ಸಂಸ್ಥಾನದಲ್ಲಿ ಇಂತಹ ಯೋಜನೆಗಳು ಎಷ್ಟು ಇವೆ ಅವುಗಳ ಎಲ್ಲ ವಿವರಗಳನ್ನು ತರಿಸಿಕೊಂಡು ಆಮೇಲೆ ಇದರ ಬಗ್ಗೆ ಆಲೋಚನೆ ಮಾಡುತ್ತೇನೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಸನ್ಮಾನ್ಯ ದೇವೇಗೌಡರಿಗೂ ಆ ಪ್ರದೇಶ ಗೊತ್ತಿರುತ್ತದೆ. ದಯಮಾಡಿ ಇದನ್ನು ಗಮನಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಇದಕ್ಕಾಗಿ ೧೫ ಲಕ್ಷ ರೂಪಾಯಿಗಳ ಅಂದಾಜು ಪೆಚ್ಚು ತಯಾರಾಗಿದೆ. ರೈತರು ಈಗಾಗಲೇ ಫೈನಾನ್ಸ್ ಇನ್ಸಿಟಿಟ್ಯೂಷನ್‌ನಿಂದ ಸಾಲವನ್ನು ತೆಗೆದುಕೊಂಡು ಇದರಲ್ಲಿ ಹಣವನ್ನು ತೊಡಗಿಸಿದ್ದಾರೆ. ಅವರು ಕೊಟ್ಟಿರತಕ್ಕಂತಹ ಹಣವನ್ನು ವಾಪಸ್ಸು ಮರುಪಾವತಿ ಮಾಡಬೇಕಾಗಿದೆ. ಈ ಯೋಜನೆಯನ್ನು ಸರ್ಕಾರ ವಹಿಸಿಕೊಳ್ಳಬೇಕಾದರೆ, ಇದರ ಬಗ್ಗೆ ಸರ್ಕಾರದ ಧೋರಣೆ ಬರುತ್ತದೆ. ಸರ್ಕಾರ ತನ್ನ ಧೋರಣೆಯನ್ನು ಘೋಷಣೆ ಮಾಡಬೇಕಾಗುತ್ತದೆ. ಒಂದು ಪೇಳೆ ವಹಿಸಿಕೊಳ್ಳಬೇಕಾದರೆ ಅದರಲ್ಲಿರತಕ್ಕಂತಹ ಅಸೆಟ್ಸ್ ಮತ್ತು ಲಯಬಿಲಿಟೀಸ್‌ನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ನಿರ್ಣಯ ಮಾಡಬೇಕಾಗುತ್ತದೆ. ಇಂತಹ ಏತ ನೀರಾವರಿ ಯೋಜನೆಗಳನ್ನು ಸಹಕಾರಿ ಸಂಸ್ಥೆಗಳ ಮೂಲಕ ಏನು ಮಾಡಿದ್ದಾರೋ ಅವುಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಘೋಷಣೆ ಮಾಡಬೇಕಾಗುತ್ತದೆ. ಅಸೆಟ್ಸ್ ಮತ್ತು ಲಯಬಿಲಿಟೀಸ್ ಮತ್ತು ಅವರು ಕೊಟ್ಟಂತಹ ಸಾಲ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ರೈತರಿಗೆ ಕಾಡಿನ ಕಟ್ಟಿಗೆ ಉಪಯೋಗಿಸಲು ಪರವಾನಿಗೆ ಕೊಡುವ ಬಗ್ಗೆ.

೩೯. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಮಲೆನಾಡು ಪ್ರದೇಶದ ಕಾಡಿನಲ್ಲಿ ಕಾಡು ಕಟ್ಟಿಗೆ ಕೊಳೆತು ಬೆಂಕಿಯಲ್ಲಿ ಸುಟ್ಟು ಹೋಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ, ರೈತರು ಈ ಕಟ್ಟಿಗೆಯನ್ನು ಉಪಯೋಗಿಸುವುದಕ್ಕೆ ಪರವಾನಗಿ ಕೊಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ.

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಮಲೆನಾಡಿನ ಅರಣ್ಯ ಪ್ರದೇಶಗಳಲ್ಲಿ ಸೌದೆಯು ಕೊಳೆತು ಮತ್ತು ಬೆಂಕಿಯಲ್ಲಿ ಸುಟ್ಟು ಹೋಗಿರುವ ಯಾವ ಪ್ರಕರಣವೂ ಸರ್ಕಾರದ ಗಮನಕ್ಕೆ ಬಂದಿಲ್ಲ.

(ಆ) ತಲೆ ಹೊರೆಯಿಂದ ಉಚಿತವಾಗಿ ಒಣಗಿದ ಕಟ್ಟಿಗೆಗಳನ್ನೂ ಅರಣ್ಯದ ಹತ್ತಿರದಲ್ಲಿ ವಾಸ ಮಾಡುತ್ತಿರುವವರು ಸ್ವಂತ ಉಪಯೋಗಕ್ಕಾಗಿ ಹತ್ತಿರದ ಜಿಲ್ಲಾ ಅರಣ್ಯಗಳಿಂದ ತರಲು ಯಾವ ಅಡಚಣೆಯೂ ಇರುವುದಿಲ್ಲ.